2018 ಕ.ತೀ.ವ 646

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲಗೌಡ

ವಿರುಪಾಕ್ಷಪ್ಪ –ವಿರುದ್ಧ– ಶರಣಪ್ಪ ಮತ್ತು ಇತರರು*

ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ಅಧ್ಯಾದೇಶ 41 ನಿಯಮ 22

ಪ್ರತಿವಾದಿಯು ಮೇಲ್ಮನವಿಯಲ್ಲಿ, ಕೆಳ ನ್ಯಾಯಾಲಯದ ಡಿಕ್ರಿಯನ್ನು ಸಮರ್ಥಿಸುವ ಸಂದರ್ಭದಲ್ಲಿ ಕೆಳನ್ಯಾಯಾಲಯದ ಯಾವುದೇ ವಿಷಯದ ಕುರಿತು ನಿರ್ಣಯಿಸಿದ ಅಂಶಗಳ ಕುರಿತು ಪ್ರಶ್ನಿಸಬಹುದಾಗಿದೆ. ಅಂತಹ ಸಂದರ್ಭದಲ್ಲಿ ಮೇಲ್ಮನವಿಯಲ್ಲಿ ತಕರಾರು ಅರ್ಜಿಯನ್ನು ಅಥವಾ ಪ್ರತ್ಯೇಕ ಅಪೀಲನ್ನು ಹಾಕುವ ಅವಶ್ಯಕತೆ ಇರುವುದಿಲ್ಲ.

ಪ್ರತಿವಾದಿಯು ಕೆಳನ್ಯಾಯಾಲಯವು ತನ್ನ ಯಾವುದೇ ಪರಿಹಾರ ಕೋರಿಕೆಯನ್ನು ತಿರಸ್ಕರಿಸಿದ ಸಂದರ್ಭದಲ್ಲಿ ತಕರಾರು ಅರ್ಜಿ ಅಥವಾ ಪ್ರತ್ಯೇಕ ಅಪೀಲನ್ನು ತನ್ನ ಅರ್ಜಿಯೊಂದಿಗೆ ಹಾಕಬಹುದಾಗಿದೆ.

ತಕರಾರು ಅರ್ಜಿ ಅಥವಾ ಪ್ರತ್ಯೇಕ ಅಪೀಲು ಕೆಳನ್ಯಾಯಾಲಯದ ಸಂಪೂರ್ಣ ಡಿಕ್ರಿಯ ವಿರುದ್ಧ ಹಾಕಬಹುದು ಹೊರತು ಕೇವಲ ಕೆಳನ್ಯಾಯಾಲಯವು ಯಾವುದೇ ಒಂದು ಅಂಶದ ಕುರಿತು ನೀಡಿದ ನಿರ್ಣಯದ ಮೇಲೆ ಬರುವುದಿಲ್ಲ.

ಪ್ರಕರಣ 100ರ ಅಡಿ ಉಚ್ಚ ನ್ಯಾಯಾಲಯವು ಕಾನೂನಿನ ತಪ್ಪು ಅಂಶ ಅಥವಾ ತಪ್ಪು ನಿರ್ಣಯದ ಹೊರತು ಇತರೆ ಅಂಶಗಳಡಿ ಉಪಯೋಗಿಸುವಂತಿಲ್ಲ. ಆದ್ದರಿಂದ ಪ್ರಸ್ತುತ ಅಪೀಲನ್ನು ತಿರಸ್ಕರಿಸಲಾಗಿದೆ.

*ನಿಯತ ಎರಡನೇ ಅಪೀಲು ಸಂ: 5181/2010, ದಿನಾಂಕ 10ನೇ ಜೂನ್, 2016.

*ಉಲ್ಲೇಖಿಸಲಾದ ಮೊಕದ್ದಮೆಗಳು* *ಪ್ಯಾರಾಗಳಲ್ಲಿ*

1. *(2013) 9 ಎಸ್‌ಸಿಸಿ 261*
   *ಹರದೆವಿಂದರ್ ಸಿಂಗ್ -ವಿರುದ್ಧ-*
   *ಪರಮಜಿತ್ ಸಿಂಗ್ ಮತ್ತು ಇತರರು* *(ಉಲ್ಲೇ) 5*
2. *(1999) 7 ಎಸ್‌ಸಿಸಿ 435*
   *ರವಿಂದರ್ ಕುಮಾರ್ ಶರ್ಮಾ -ವಿರುದ್ಧ-*
   *ಅಸ್ಸಾಂ ಸರ್ಕಾರ ಮತ್ತು ಇತರರು* *(ಉಲ್ಲೇ) 7*
3. *(2003) 9 ಎಸ್‌ಸಿಸಿ 606*
   *ಬನರಾಸಿ -ವಿರುದ್ಧ- ರಾಮ್ ಫಾಲ್* *(ಉಲ್ಲೇ) 8*
4. *(2014) 2 ಎಸ್‌ಸಿಸಿ 600*
   *ಮ್ಯಾನೇಜ್‌ಮೆಂಟ್ ಆಫ್ ಸುಂದರಮ್*
   *ಇಂಡಸ್ಟ್ರೀಸ್ ಲಿ. -ವಿರುದ್ಧ- ಸುಂದರಮ್ ಇಂಡಸ್ಟ್ರೀಸ್*
   *ಎಂಪ್ಲಾಯೀಸ್ ಯೂನಿಯನ್* *(ಉಲ್ಲೇ) 9*

ಅರ್ಜಿದಾರರ ಪರ: ಶ್ರೀ ಹುನುಮಂತರೆಡ್ಡಿ ಸಾಹುಕಾರ್, ವಕೀಲರು;

## ತೀರ್ಪು

**ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ:**

ಅಪೀಲುದಾರನು, ಪ್ರತ್ಯರ್ಜಿದಾರರ ವಿರುದ್ಧ ಪ್ರತಿಕೂಲ ಸ್ವಾಧೀನಕ್ಕೆ ಸಂಬಂಧಿಸಿದಂತೆ ಘೋಷಣೆಯ ಹಾಗೂ ನಿರ್ಬಂಧಕಾಜ್ಞೆಯ ಡಿಕ್ರಿಯನ್ನು ಹೊರಡಿಸಲು ಗದಗದ 3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶ (ಕಿರಿಯ ವಿಭಾಗ)ರ ನ್ಯಾಯಲಯದಲ್ಲಿ ಒ.ಎಸ್.ಸಂ.65/2000ವನ್ನು ಸಲ್ಲಿಸಿರುತ್ತಾನೆ. ಪ್ರತಿವಾದಿಗಳು ಲಿಖಿತ ಹೇಳಿಕೆಗಳನ್ನು ಸಲ್ಲಿಸಿ, ದಾವೆಯನ್ನು ಪ್ರಶ್ನಿಸಿರುತ್ತಾರೆ. ಅಧಿವಿಚಾರಣಾ ನ್ಯಾಯಾಧೀಶರು ಆರು

ವಿವಾದಾಂಶಗಳನ್ನು ಪ್ರಸ್ತಾಪಿಸಿರುತ್ತಾರೆ. ವಾದಿಯನ್ನು ಸ್ವತಃ ಪ್ರಾ.ಸಾ.1 ಎಂದು ವಿಚಾರಣೆಮಾಡಲಾಗಿದ್ದು, ಇಬ್ಬರು ಸಾಕ್ಷಿಗಳನ್ನು ಪ್ರಾ.ಸಾ.2 ಹಾಗು 3 ಎಂದು ವಿಚಾರಣೆ ನಡೆಸಿ, ನಿಶಾನೆ ಪಿ.1 ರಿಂದ ಪಿ.17ರ ವರೆಗೆ 17 ದಸ್ತಾವೇಜುಗಳನ್ನು ಗುರುತು ಮಾಡಲಾಗಿರುತ್ತದೆ. ಪ್ರತಿವಾದಿ ಸಂ.1ನ್ನು ಸ್ವತಃ ಡಿಡಬ್ಲ್ಯೂ-1 ಎಂದು ಪರೀಕ್ಷಿಸಲಾಗಿದ್ದು, ಇಬ್ಬರು ಸಾಕ್ಷಿದಾರರನ್ನು ಡಿಡಬ್ಲ್ಯೂ-2 ಹಾಗು 3 ಎಂದು ಪರೀಕ್ಷಿಸಲಾಗಿದ್ದು, ದಸ್ತಾವೇಜನ್ನು ನಿಶಾನೆ ಡಿ1 ಎಂದು ಗುರುತು ಮಾಡಲಾಗಿರುತ್ತದೆ. ಅಧಿವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರು ದಾಖಲೆ ಮೇಲೆ ಮಂಡಿಸಿರುವ ಸಾಕ್ಷ್ಯದ ಗುಣಾವಗುಣಾದ ಮೇಲೆ ವಿವಾದಾಂಶ ಸಂ.1ಕ್ಕೆ ಅಂದರೆ, ವಾದಿಯು, ಮೃತ ರುದ್ರಪ್ಪ 01.10.1985 ರಂದು ತನ್ನ ಹೆಸರಿನಲ್ಲಿ ಕ್ರಯದ ಒಪ್ಪಂದವನ್ನು ಮಾಡಿಕೊಟ್ಟಿರುತ್ತಾರೆಂದು ಸಕಾರಾತ್ಮಕವಾಗಿಯೂ ಹಾಗು, ವಿವಾದಾಂಶ ಸಂ.2 ರಿಂದ 5ರ ವರೆಗೆ ನಕಾರಾತ್ಮಕವಾಗಿಯು ರುಜುವಾತು ಪಡಿಸಿರುತ್ತಾರೆಂದು ತೀರ್ಪು ನೀಡಿ, ದಾವೆಯನ್ನು ವಜಾಮಾಡಿರುತ್ತಾರೆ. ವಾದಿಯು ಸಿವಿಲ್ ಪ್ರಕ್ರಿಯಾ ಸಂಹಿತೆಯ 96ನೇ ಪ್ರಕರಣದಡಿಯಲ್ಲಿ ಅಪೀಲನ್ನು ಸಲ್ಲಿಸಿ, ಗದಗದಲ್ಲಿನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗು ಸಿಎಂಜೆಯುವರ ಕಡತದ ಮೇಲೆ ಆರ್.ಎ. ಸಂ.145/2002 ಎಂದು ನೋಂದಾಯಿಸಲಾಗಿರುತ್ತದೆ. ಪ್ರತ್ಯರ್ಜಿದಾರರು ಹಾಜರಾಗಿ ವಿವಾದಾಂಶ ಸಂಖ್ಯೆ 1ನ್ನು ಕುರಿತಂತೆ ದಾಖಲಿಸಿರುವ ತೀರ್ಮಾನವನ್ನು ವಿರೋಧಿಸಿ, ಅಧಿವಿಚಾರಣಾ ನ್ಯಾಯಾಲಯದ ತೀರ್ಮಾನ ಅಂದರೆ ದಾವೆಯನ್ನು ವಜಾಗೊಳಿಸಿರುವುದನ್ನು ಬೆಂಬಲಿಸಿರುತ್ತಾರೆ. ದಾಖಲೆಯನ್ನು ಪರಿಶೀಲಿಸಿ, ಐದು ಅಂಶಗಳನ್ನು ಪರಿಗಣನೆಗಾಗಿ ಪ್ರಸ್ತಾಪಿಸಿರುತ್ತಾರೆ. ಸುನಾವಣೆಯ ಸಮಯದಲ್ಲಿ, ಮಾನ್ಯ ನ್ಯಾಯವಾದಿಗಳು, ಅಪೀಲುದಾರರು, ಪ್ರತಿಕೂಲ ಕಬ್ಜೆಯ ಮೂಲಕ ವಾದಿಗಳು ದಾವಾ ಸ್ವತ್ತಿಗೆ ಸ್ವಾಮ್ಯವನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಆದ್ಯತೆ ನೀಡಿರುವುದಿಲ್ಲವೆಂದೂ, ಪರಿಶೀಲನಾಂಶ ಸಂ.2 ಅಪೀಲುದಾರ-ವಾದಿಯು ಪ್ರತಿಕೂಲ ಸ್ವಾಧೀನದ ಮೂಲಕ ದಾವಾ ಸ್ವತ್ತಿನ ಮೇಲೆ ಪೂರ್ಣ ಸ್ವಾಮ್ಯವನ್ನು ಈತ ಹೊಂದಿದ್ದಾನೆಂಬುದನ್ನು ಪರಿಗಣನೆಯ ಸಂಬಂಧದಲ್ಲಿ ಊರ್ಜಿತಗೊಂಡಿರುವುದಿಲ್ಲವೆಂದು ಅಭಿಪ್ರಾಯಪಟ್ಟಿರುವುದನ್ನು ರುಜುವಾತು ಪಡಿಸಿರುತ್ತಾರೆಯೆ ಎಂಬುದು ಪ್ರಸ್ತಾಪವಾಗಿರುತ್ತದೆ. ಸಾಕ್ಷ್ಯದ ಸ್ವತಂತ್ರ

ನಿರ್ಧರಣೆಯ ಮೇಲೆ, ಅಪೀಲು ನ್ಯಾಯಾಧೀಶರು, 01.10.1985 ರಂದಿನ ಕ್ರಯಪತ್ರ ಬರೆದುಕೊಟ್ಟಿರುವುದನ್ನು ಹಾಗು ಇದರ ಅನುಸರಣೆಯಲ್ಲಿ ಆತ ದಾವಾ ಸ್ವತ್ತನ್ನು ಸ್ವಾಧೀನದಲ್ಲಿಟ್ಟುಕೊಂಡಿದ್ದಾರೆ ಹಾಗು ಅದರ ಅನುಭೋಗದಲ್ಲಿದ್ದಾನೆಂದು ರುಜುವಾತುಪಡಿಸಲು ವಾದಿಯು ವಿಫಲನಾಗಿರುತ್ತಾನೆಂದು ಅಭಿಪ್ರಾಯಪಟ್ಟಿರುತ್ತಾರೆ. ವಾದಿಯು, ಮೂ.ದಾ.ಸಂ.270/1998 ರಲ್ಲಿ ಹೊರಡಿಸಿದ ಡಿಕ್ರಿಯು ಮೋಸದ್ದಾಗಿದೆಯೆಂದು ರುಜುವಾತುಪಡಿಸಲು ವಿಫಲನಾಗಿರುತ್ತಾನೆಂದು ಅಭಿಪ್ರಾಯಪಡಲಾಗಿರುತ್ತದೆ. ಮುಂದುವರೆದು, ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿರುವ ತೀರ್ಪು ಹಾಗು ಡಿಕ್ರಿಯು ಸಮರ್ಥವಾಗಿದ್ದು, ಮಧ್ಯೆಪ್ರವೇಶಿಕೆಗೆ ಅವಕಾಶವಿರುವುದಿಲ್ಲ ಹಾಗು ಅಪೀಲು ವಜಾಗೊಂಡಿರುತ್ತದೆಂದೂ ಸಹ ಅಭಿಪ್ರಾಯಪಟ್ಟಿರುತ್ತದೆ. ಸದರಿ ತೀರ್ಪು ಹಾಗು ಡಿಕ್ರಿಯನ್ನು ನಿರಾಕರಿಸಿ, ವಾದಿಯು ಸಿವಿಲ್ ಪ್ರಕ್ರಿಯಾ ಸಂಹಿತೆಯ 100ನೇ ಪ್ರಕರಣದಡಿಯಲ್ಲಿ ಈ ಎರಡನೇ ಅಪೀಲನ್ನು ಸಲ್ಲಿಸಿರುತ್ತಾನೆ.

2. ಮಾನ್ಯ ವಕೀಲರಾದ ಶ್ರೀ ಹನುಮಂತರೆಡ್ಡಿ ಸಾಹುಕಾರ್‌ರವರು, ವಾದಿಯು ಅಧಿವಿಚಾರಣಾ ನ್ಯಾಯಾಲಯವು, ಕ್ರಯದ ಒಪ್ಪಂದದ ಬಲದಿಂದ ದಾವಾ ಸ್ವತ್ತಿನ ಅಧಿಭೋಗದಲ್ಲಿರುತ್ತಾರೆಂದೂ ಹಾಗೂ ವಿವಾದಾಂಶ ಸಂ.1ಕ್ಕೆ ಸಕಾರಾತ್ಮಕವಾಗಿ ಉತ್ತರಿಸಿದ್ದು, ಅಧೀನ ಅಪೀಲು ನ್ಯಾಯಾಲಯವು ವಿವಾದಾಂಶ ಸಂ.1ಕ್ಕೆ ನಕಾರಾತ್ಮಕವಾಗಿ ಉತ್ತರಿಸಿರುವುದು ಹಾಗು ಕ್ರಯ ಒಪ್ಪಂದವು ರುಜುವಾತಾಗಿಲ್ಲವೆಂದು ಅಭಿಪ್ರಾಯ ಪಟ್ಟಿರುವ ನಿರ್ಣಯವು ಸಮರ್ಥನೀಯವಾಗಿರುವುದಿಲ್ಲವೆಂದು ವಾದಿಸಿರುತ್ತಾರೆ. ಇವರು, ಅಧಿವಿಚಾರಣಾ ನ್ಯಾಯಾಲಯವು ಪಾಟೀ ಸವಾಲು ಅಥವಾ ಅಪೀಲನ್ನು ಸಲ್ಲಿಸುವ ಮೂಲಕ ಪ್ರತಿವಾದಿಗಳು ವಿವಾದಾಂಶ ಸಂ.1ರ ಮೇಲೆ ದಾಖಲಿಸಿರುವ ನಿರ್ಣಯವನ್ನು ನಿರಾಕರಿಸಿರುವುದಿಲ್ಲವೆಂದೂ, ಅಧೀನ ನ್ಯಾಯಲಯವು, 01.10.1985 ರಂದಿನ ಕ್ರಯ ಒಪ್ಪಂದ ಪತ್ರವನ್ನು ಯುಕ್ತವಾದುದೆಂದು ರುಜುವಾತು ಪಡಿಸಿರುವುದಿಲ್ಲ ಹಾಗು ವಾದಿಗಳು ದಾವ ಸ್ವತ್ತಿನ ಅಧಿಬೋಗ ಹಾಗು ಅನುಭೋಗವನ್ನು ಹೊಂದಿಲ್ಲವೆಂದು ಅಭಿಪ್ರಾಯಪಟ್ಟಿರುವುದು ಕಾನೂನು ಬಾಹಿರವೆಂದು ನಿವೇದಿಸಿಕೊಂಡಿರುತ್ತಾರೆ. ಎರಡನೆಯದಾಗಿ, ದಾವೆಯ ದಾಖಲೆಯ

ಮೇಲೆ ಯಾವುದೇ ಯುಕ್ತವಾದ ಸಾಕ್ಷ್ಯವಿರುವುದಿಲ್ಲವೆಂದೂ ವಾದಿಸಿರುತ್ತಾರೆ. ಅಲ್ಲದೆ ಇವರು, ವಾದಿಯು, ದಾವಾ ಸ್ವತ್ತಿನ ಅಧಿಭೋಗ ಹಾಗು ಅನುಭೋಗದಲ್ಲಿ ತಾನು ಇರುವುದನ್ನು ರುಜುವಾತುಪಡಿಸಲು ನಂಬಲರ್ಹ ಸಾಕ್ಷ್ಯವನ್ನು ಒದಗಿಸುವುದು, ಶಾಶ್ವತ ನಿರ್ಬಂದಕಾಜ್ಞೆಯ ಡಿಕ್ರಿಯನ್ನು ಹೊರಡಿಸಿರುವುದಕ್ಕೆ ಸಂಬಂಧಿಸಿದಂತೆ ಮಾಡಿರುವ ಕ್ಲೇಮಿನ ಮಟ್ಟಿಗೆ ದಾವೆಯನ್ನು ವಜಾಮಾಡುವುದು ಕಾನೂನು ಬಾಹಿರವೆಂದೂ ನಿವೇದಿಸಿಕೊಂಡಿರುತ್ತಾರೆ. ಇವರು, ಪ್ರಶ್ನಿತ ತೀರ್ಪುಗಳ ಕಾನೂನಿನ ಸಾರಭೂತ ಪ್ರಶ್ನೆಗಳಿಗೆ ಹಾಗು ಮಧ್ಯೆಪ್ರವೇಶಿಕೆಗೆ ಕೂಡ ಅವಕಾಶ ಒದಗಿಸಿ ಕೊಡುತ್ತದೆ ಎಂದೂ ವಾದಿಸಿರುತ್ತಾರೆ.

3. ಪರಿಗಣನೆಗೆ ಸಂಬಂಧಿಸಿದ ಅಂಶಗಳು ಈ ಮುಂದಿನಂತಿರುತ್ತವೆ.

i) ಯಾವ ಪಕ್ಷಕಾರರ ಹೆಸರಿನಲ್ಲಿ ಡಿಕ್ರಿಯನ್ನು ಬೆಂಬಲಿಸಲು ಅಪೀಲು ಅಥವಾ ಪಾಟೀ-ಸವಾಲನ್ನು ಸಲ್ಲಿಸಲು ಅಧೀನ ನ್ಯಾಯಾಲಯವು, ಆ ಪಕ್ಷಕಾರನ ಹೆಸರಿನಲ್ಲಿ ಕಂಡುಬಂದ ವಿವಾದಾಂಶಗಳು / ಪರಿಶೀಲನಾಂಶಗಳ ಮೇಲೆ ಮಾತ್ರವಾಗಿರದೆ ಆತನ ವಿರುದ್ಧ ಅಭಿಪ್ರಾಯಪಟ್ಟಂಥ ವಿವಾದಾಂಶಗಳು / ಪರಿಶೀಲನಾಂಶಗಳನ್ನು ಕುರಿತಂತೆ ಡಿಕ್ರಿಯನ್ನು ಹೊರಡಿಸಿರುವುದು ಕಾನೂನಾತ್ಮಕವಾಗಿ ಅವಶ್ಯಕವಾಗಿರುತ್ತದೆಯೆ?

ii) ಮೊದಲ ಅಪೀಲು ನ್ಯಾಯಾಲಯವು ದಾಖಲಿಸಿದ ವಾಸ್ತವಾಂಶಗಳ ಫಲಿತಗಳನ್ನು ವ್ಯತಿರಿಕ್ತವಾಗಬೇಕೆಂದು ತೋರಿಸಲಾಗದಿದ್ದಲ್ಲಿ, ದಾಖಲೆ ಮೇಲೆ ತಂದ ಸಾಕ್ಷ್ಯವನ್ನು ಮರು-ನಿಷ್ಕರ್ಷೆಗೆ ಎರಡನೇ ಅಪೀಲಿನಲ್ಲಿ ಇದು ಮುಕ್ತವಾಗಿರುತ್ತದೆಯೆ?

4. ಉಲ್ಲೇಖ: ಪರಿಶೀಲನಾಂಶ ಸಂ.(1):

ಅಪೀಲಿನಲ್ಲಿನ ಪ್ರತ್ಯರ್ಜಿದಾರನು, ಆತನ ವಿರುದ್ಧ ಅಧಿವಿಚಾರಣಾ ನ್ಯಾಯಾಲಯವು ನೀಡಬಹುದಾದಂಥ ಯಾವುದೇ ಪರಿಶೀಲನಾಂಶಗಳನ್ನು ಪ್ರಶ್ನಿಸುವ ಮೂಲಕ ಕೂಡ ಅಧಿವಿಚಾರಣಾ ನ್ಯಾಯಾಲಯದ ಡಿಕ್ರಿಯನ್ನು ಬೆಂಬಲಿಸಲು ಹಕ್ಕುಳ್ಳವರಾಗಿರುತ್ತಾರೆ. ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಡಿಕ್ರಿಯನ್ನು ಬೆಂಬಲಿಸುವುದಕ್ಕೆ ಸಂಬಂಧಿಸಿದಂತೆ, ಅಂತಿಮ ಡಿಕ್ರಿಯೇ ಈತನ ಪರವಾಗಿರುವಾಗ ಈತನ ವಿರುದ್ಧ ಅಧಿವಿಚಾರಣಾ ನ್ಯಾಯಾಲಯವು ಸಲ್ಲಿಸಿದ ನಿರ್ದಿಷ್ಟ ತೀರ್ಪನ್ನು ಪ್ರಶ್ನಿಸಿ ಪಾಟೀ–ಸವಾಲು ಅಥವಾ ಸ್ವತಂತ್ರ ಅಪೀಲಿನ ಜ್ಞಾಪನವನ್ನು ಸಲ್ಲಿಸುವುದು ಅಪೀಲಿನಲ್ಲಿನ ಪ್ರತ್ಯರ್ಜಿದಾರರಿಗೆ ಸಂಬಂಧಿಸಿದಂತೆ ಅವಶ್ಯಕವಾಗಿರುವುದಿಲ್ಲ. ಅಧಿವಿಚಾರಣಾ ನ್ಯಾಯಾಲಯವು ಪ್ರತ್ಯರ್ಜಿದಾರರಿಗೆ ನಕಾರಾತ್ಮಕವಾಗಿರುವಂಥ ಯಾವುದೇ ಪರಿಹಾರವನ್ನು ಪ್ರತ್ಯರ್ಜಿದಾರರು ಕ್ಲೇಮು ಮಾಡಿದಲ್ಲಿ ಮಾತ್ರ ಪಾಟೀ ಆಕ್ಷೇಪಣೆ ಅವಶ್ಯಕವಾಗಿರುತ್ತದೆ.

5. ***ಹರದೆವಿಂದರ್ ಸಿಂಗ್ –ವಿರುದ್ಧ– ಪರಮ್‌ಜಿತ್ ಸಿಂಗ್ ಮತ್ತು ಇತರರು***[1], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, ಪ್ರತ್ಯರ್ಜಿದಾರನ ಹೆಸರಿನಲ್ಲಿರುವ ಡಿಕ್ರಿಯ ಮಟ್ಟಿಗೆ ಪಾಟೀ–ಆಕ್ಷೇಪಣೆಯನ್ನು ಸಲ್ಲಿಸಲು ಯಾರ ಅವಲಂಬನೆ ಇಲ್ಲದೆ ಸ್ವತಃ ರಕ್ಷಿಸಬಹುದಾದಂಥ ಪ್ರತ್ಯರ್ಜಿದಾರರು ಡಿಕ್ರಿಯ ಯಾವುದೇ ಭಾಗವನ್ನು ನಿರಾಕರಿಸಲು ಉದ್ದೇಶಿಸಿದಲ್ಲಿ ಪಾಟೀ–ಆಕ್ಷೇಪಣೆಯನ್ನು ಸಲ್ಲಿಸುವುದು ಆತನ ಮೇಲಿರುವ ಹೊಣೆಗಾರಿಕೆಯಾಗಿರುತ್ತದೆಯೆಂದು ಅಭಿಪ್ರಾಯಪಟ್ಟಿದೆ.

6. ಪ್ರಸ್ತುತ ಪ್ರಕರಣದಲ್ಲಿ, ಅಧಿವಿಚಾರಣಾ ನ್ಯಾಯಾಧೀಶರು ವಾದಿಯಪರವಾಗಿ ವಿವಾದಾಂಶ ಸಂ.1ಕ್ಕೆ ಉತ್ತರಿಸಿದರೂ ಕೂಡ, ದಾವೆಯನ್ನು ವಜಾಗೊಳಿಸಲಾಗಿರುತ್ತದೆ. ಪ್ರತಿವಾದಿಗಳು ಲಿಖಿತ ಹೇಳಿಕೆಯನ್ನು ಸಲ್ಲಿಸುವ ಮೂಲಕ ದಾವೆಯನ್ನು ವಜಾಮಾಡಲು ಕೋರಿಕೆ ಸಲ್ಲಿಸಿದ್ದು, ಯಾವುದೇ ಪ್ರತಿ ಕ್ಲೇಮನ್ನು ಸಲ್ಲಿಸಿರುವುದಿಲ್ಲ. ದಾವೆಯಲ್ಲಿ ಪ್ರತಿವಾದಿಗಳು ಯಾವುದೇ ಪರಿಹಾರವನ್ನು ಕೋರದೆ ಅಧಿವಿಚಾರಣಾ

1. (2013) 9 ಎಸ್‌ಸಿಸಿ 261

ನ್ಯಾಯಾಲಯವು ನಕಾರಾತ್ಮಕವಾಗಿ ತೀರ್ಪು ನೀಡಿರುತ್ತದೆ. ಒಂದು ಅಪೀಲು ಅಥವಾ ಪಾಟೀ–ಆಕ್ಷೇಪಣೆಯು ನ್ಯಾಯಾಲಯವು ಹೊರಡಿಸಿದ ಡಿಕ್ರಿಯ ವಿರುದ್ಧ ತಪ್ಪಿಸಿಕೊಳ್ಳ ಬಹುದಾಗಿದ್ದು, ಪರಿಗಣನೆಗೆ ಸಂಬಂಧಿಸಿದಂತೆ ಎತ್ತಲಾದ ಕೆಲವು ಪರಿಶೀಲಾನಾಂಶ ಅಥವಾ ವಿವಾದಾಂಶದ ಮೇಲಿನ ಕೇವಲ ಫಲಿತದ ವಿರುದ್ಧವಾಗಿರುವುದಿಲ್ಲವೆಂಬುದು ಸರ್ವಸಾಮಾನ್ಯ ಸಂಗತಿಯಾಗಿರುತ್ತದೆ.

7. ***ರವಿಂದರ್ ಕುಮಾರ್ ಶರ್ಮಾ –ವಿರುದ್ಧ– ಅಸ್ಸಾಂ ಸರ್ಕಾರ ಮತ್ತು ಇತರರು***[2], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

> "23. ...... ಅಪೀಲಿನಲ್ಲಿನ ಪ್ರತ್ಯರ್ಜಿದಾರ–ಪ್ರತಿವಾದಿಗಳು ಪಾಟೀ–ಆಕ್ಷೇಪಣೆಗಳನ್ನು ಸಲ್ಲಿಸದೆ, ಪ್ರತಿವಾದಿ – ಪ್ರತ್ಯರ್ಜಿದಾರರ ವಿರುದ್ಧ ಅಧೀನ ನ್ಯಾಯಾಲಯವು ದಾವೆಯನ್ನು ವಜಾಗೊಳಿಸಿರುವ ಮಟ್ಟಿಗೆ ಡಿಕ್ರಿಯನ್ನು ಎತ್ತಿಹಿಡಿಯುವ ಉದ್ದೇಶಕ್ಕೆ ಸಂಬಂಧಿಸಿದಂತೆ ಪ್ರತ್ಯರ್ಜಿದಾರರ ವಿರುದ್ಧ ಹೊರಡಿಸಲಾಗಿರುವ ಅದರಲ್ಲಿ ಡಿಕ್ರಿಯೂ ಒಂದು ಭಾಗವಾಗಿದ್ದು, ಇದರ ಮೇಲಿನ ಪ್ರತಿಕೂಲ ನಿರ್ಣಯಗಳನ್ನು ಖಂಡಿಸಬಹುದಾಗಿರುತ್ತದೆ. ಪಾಟೀ ಆಕ್ಷೇಪಣೆ ಸಲ್ಲಿಸುವುದು 1996ರ ತಿದ್ದುಪಡಿಯ ತರುವಾಯ ಸ್ಪಷ್ಟವಾಗಿ ಐಚ್ಛಿಕವಾಗಿರುತ್ತದೆಯೇ ಹೊರತು ಆಜ್ಞಾಪಕವಾಗಿರುವುದಿಲ್ಲವೆಂದು ನಾವು ಅಭಿಪ್ರಾಯಪಡುತ್ತೇವೆ.

8. ***ಬನರಾಸಿ –ವಿರುದ್ಧ– ರಾಮ್ ಫಾಲ್***[3], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, ಒಬ್ಬ ವ್ಯಕ್ತಿಗೆ ಡಿಕ್ರಿಯಿಂದ ಪೂರ್ವಗ್ರಹಪೂರ್ವಕವಾಗಿ ಅಥವಾ ಪ್ರತಿಕೂಲವಾಗಿ ಬಾಧಕವಾಗದ ಹೊರತು ಆತ ಅಪೀಲನ್ನು ಸಲ್ಲಿಸಲು ಹಕ್ಕುಳ್ಳವನಾಗಿರತಕ್ಕದ್ದಲ್ಲ ಹಾಗು ಯಾವುದೇ ಅಪೀಲನ್ನು ಕೇವಲ ತೀರ್ಪಿಗೆ

2. (1999) 7 ಎಸ್‌ಸಿಸಿ 435    3. (2003) 9 ಎಸ್‌ಸಿಸಿ 606

ವಿರುದ್ಧವಾಗಿ ಮಾಡತಕ್ಕದ್ದಲ್ಲ ಹಾಗು ಸಿವಿಲ್ ಪ್ರಕ್ರಿಯಾ ಸಂಹಿತೆಯ 96 ಹಾಗು 100ನೇ ಪ್ರಕರಣಗಳು ಡಿಕ್ರಿಯ ವಿರುದ್ಧದ ಅಪೀಲಿಗೆ ಅವಕಾಶಮಾಡಿಕೊಡುತ್ತವೆಯೇ ಹೊರತು ತೀರ್ಪಿಗೆ ವಿರುದ್ಧವಾಗಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ.

9. ***ಮ್ಯಾನೇಜ್‌ಮೆಂಟ್ ಆಫ್ ಸುಂದರಮ್ ಇಂಡಸ್ಟ್ರೀಸ್ ಲಿ. –ವಿರುದ್ಧ– ಸುಂದರಮ್ ಇಂಡಸ್ಟ್ರೀಸ್ ಎಂಪ್ಲಾಯೀಸ್ ಯೂನಿಯನ್***[4], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

> "19. ತೀರ್ಪನ್ನು ಯಾವ ಪಕ್ಷಕಾರನ ಪರವಾಗಿ ನೀಡಲಾಗಿರುತ್ತದೋ ಆ ತೀರ್ಪು ಆ ಪಕ್ಷಕಾರನ ಪರವಾಗಿರುವಂಥ ಆಧಾರಗಳನ್ನು ಮಾತ್ರ ಬೆಂಬಲಿಸದೆ ಅಧೀನ ನ್ಯಾಯಾಲಯವು ಆತನ ವಿರುದ್ಧ ನೀಡಿರಬಹುದಾದಂಥ ಆಧಾರಗಳನ್ನೂ ಸಹ ಬೆಂಬಲಿಸಬಹುದಾಗಿರುತ್ತದೆ ಎಂಬ ನ್ಯಾಯಿಕ ಸ್ಥಿತಿಯು ನ್ಯಾಯೋಚಿತವಾಗಿ ಇತ್ಯರ್ಥ ಗೊಂಡಿದ್ದಾಗಿರುತ್ತದೆ."

10. ಮೇಲಿನದರ ಹಿನ್ನಲೆಯಲ್ಲಿ, ಶ್ರೀ ಹನುಮಂಥ ರೆಡ್ಡಿ ಸಾಹುಕಾರ್‌ರವರು ವಾದಿಸಿದ ಮೊದಲ ವಾದದಲ್ಲಿ ಯಾವುದೇ ಹುರುಳಿರುವುದಿಲ್ಲ. ಹಾಗಾಗಿ ಪರಿಶೀಲನಾಂಶ ಸಂ.(i)ಕ್ಕೆ ನಕಾರಾತ್ಮಕವಾಗಿ ಉತ್ತರಿಸಲಾಗಿರುತ್ತದೆ.

11. ಉ: ಪರಿಶೀಲನಾಂಶ ಸಂ(ii):

ದಾಖಲೆಯನ್ನು ಪರಿಶೀಲಿಸಲಾಗಿರುತ್ತದೆ. ಈ ನ್ಯಾಯಾಲಯವು, ನಿರ್ಣಯವು ವ್ಯತಿರಿಕ್ತವಾಗಿದೆಯೆಂಬುದು ಕಂಡುಬರದ ಹೊರತು, ವಾಸ್ತವಾಂಶಗಳ ಅಂತಿಮ ನ್ಯಾಯಾಲಯವಾಗಿರುವಂಥ ಮೊದಲ ಅಪೀಲು ನ್ಯಾಯಾಲಯವು ದಾಖಲೆಮಾಡಿರುವ ವಾಸ್ತವಾಂಶದ ನಿರ್ಣಯದೊಂದಿಗೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 100ನೇ ಪ್ರಕರಣದಡಿಯಲ್ಲಿ ಅಧಿಕಾರವನ್ನು ಚಲಾಯಿಸುವಾಗ ಮಧ್ಯೆಪ್ರವೇಶಿಸುವಂತಿಲ್ಲ. ಇದರ ಮೇಲಿನ ಸೀಮಿತ ಆಧಾರದಿಂದ ಈ ನ್ಯಾಯಾಲಯವು, ಅಧೀನ

4. (2014) 2 ಎಸ್‌ಸಿಸಿ 600

ನ್ಯಾಯಾಲಯದ ತೀರ್ಪು ಕಾನೂನಿಗೆ ವಿರುದ್ಧವಾಗಿದ್ದಾಗ ಇದನ್ನು ಸಿವಿಲ್ ಪ್ರಕ್ರಿಯಾ ಸಂಹಿತೆಯ 100ನೇ ಪ್ರಕರಣದಡಿಯಲ್ಲಿ ಅಧಿಕಾರಗಳ ಚಲಾವಣೆಯಲ್ಲಿ ಸರಿಪಡಿಸಬಹುದಾದ ಇದು ಕಾನೂನಿನ ದೋಷವಾಗಿದ್ದಾಗ ಮಾತ್ರ ಮಧ್ಯೆಪ್ರವೇಶಿಸಬಹುದಾಗಿರುತ್ತದೆ. ಅಧೀನ ಅಪೀಲು ನ್ಯಾಯಾಲಯವು ದಾಖಲಿಸಿರುವ ನಿರ್ಣಯವು ಕಾನೂನಿನಲ್ಲಿ ಒಂದಾಗಿದ್ದಲ್ಲಿ ಅಥವಾ ಮಿಶ್ರಿತ ಕಾನೂನು ಹಾಗು ವಾಸ್ತವಾಂಶವಾಗಿದ್ದಲ್ಲಿ, ಈ ನ್ಯಾಯಾಲಯವು ಸರಿತನವನ್ನು ಪರೀಕ್ಷಿಸಬಹುದಾಗಿರುತ್ತದೆ. ಆದರೆ ಇದು ವಾಸ್ತವಾಂಶಗಳಲ್ಲಿ ಒಂದಾಗಿದ್ದ ಪಕ್ಷದಲ್ಲಿ, ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ತೀರ್ಪು ನೀಡುವಾಗ ಕಾನೂನಿನ ದೋಷವುಂಟಾಗಿದೆಯೆಂದು ಅಥವಾ ಇದು ಯಾವುದೇ ಸಾಕ್ಷ್ಯವನ್ನು ಆಧರಿಸಿರುವುದಿಲ್ಲ ಅಥವಾ ನಿರಂಕುಶವಾದುದಾಗಿದೆ, ಯುಕ್ತವಾಗಿರುವುದಿಲ್ಲವೆಂದು ತೋರಿಸದ ಹೊರತು ಚಲಾಯಿಸತಕ್ಕದ್ದಲ್ಲ. ಹಾಗಾಗಿ, ಇದು ವ್ಯತಿರಿಕ್ತವಾಗಿದೆ.

12. ಶ್ರೀ ಹನುಮಂತ ರೆಡ್ಡಿ ಸಾಹುಕಾರ್‌ರವರು, ದಾಖಲೆ ಮೇಲೆ ತಂದಿರುವ ಮುಖ್ಯ ಸಾಕ್ಷ್ಯದ ಬಗ್ಗೆ ಅಧೀನ ನ್ಯಾಯಾಲಯವು ಮಾಡಿರುವ ವಿವರಣೆಯನ್ನು ನಿರಸನ ಮಾಡಬೇಕೆಂದು ಹಾಗು ಅಲ್ಲಿ ಯಾವುದೇ ಸಾಕ್ಷ್ಯವನ್ನು ತಪ್ಪಾಗಿ ಓದಲಾಗಿದೆಯೆಂದು ವಾದಿಸಿರುವುದಿಲ್ಲ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಅಧೀನ ಅಪೀಲು ನ್ಯಾಯಾಲಯವು, ಸಾಕ್ಷ್ಯವನ್ನು ವಿವರಣಾತ್ಮಕವಾಗಿ ವಿಶ್ಲೇಷಿಸಿದೆ. ಆ ತರುವಾಯ ಅದರಿಂದ ಉದ್ಭವವಾದ ಪರಿಶೀಲನಾಂಶ ಸಂ.(1) ಹಾಗೂ (3)ಗಳ ಮೇಲಿನ ನಿರ್ಣಯಗಳನ್ನು ದಾಖಲಿಸಿರುತ್ತದೆ. ಹಾಗಾಗಿ, ನಮೂದಿಸಿರುವ ವಾಸ್ತವಾಂಶಗಳು ಹಾಗು ನಿರ್ಣಯಗಳ ಅಂತಿಮ ನ್ಯಾಯಾಲಯವಾಗಿರುವ ಅಧೀನ ಅಪೀಲು ನ್ಯಾಯಾಲಯವು, ವ್ಯತಿರಿಕ್ತತೆಯನ್ನು ತೋರಿಸಬೇಕಾಗಿರುವುದಿಲ್ಲ. ಹಾಗು ದಾಖಲಾದ ವಾಸ್ತವಾಂಶಗಳ ನಿರ್ಣಯಗಳೊಂದಿಗಿನ ಮಧ್ಯೆಪ್ರವೇಶಿಕೆಯು ಅನುಮತೀಯವಾಗಿರುವುದಿಲ್ಲ.

ಪ್ರಶ್ನಿತ ತೀರ್ಪು, ಕಾನೂನಿನ ಯಾವುದೇ ಸಾರಭೂತವಾದ ಪ್ರಶ್ನೆಯ ಉದ್ಭವಕ್ಕೆ ಅವಕಾಶ ಕಲ್ಪಿಸಿರುವುದಿಲ್ಲ. ಹಾಗಾಗಿ, ಎರಡನೇ ಅಪೀಲನ್ನು ತಿರಸ್ಕರಿಸಲಾಗಿರುತ್ತದೆ.

---